# ಕರ್ನಾಟಕ ವಿಧಾನ ಪರಿಷತ್ತು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** : 1461

**ಮಾನ್ಯ ಸದಸ್ಯರ ಹೆಸರು** : ಡಾ. ಉಮಾಶ್ರೀ (ನಾಮನಿರ್ದೇಶನ ಹೊಂದಿದವರು)

**ಉತ್ತರಿಸಬೇಕಾದ ದಿನಾಂಕ** : 20.03.2025

**ಉತ್ತರಿಸುವ ಸಚಿವರು** : ಕಾನೂನು, ನ್ಯಾಯ, ಮಾನವ ಹಕ್ಕುಗಳು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಾದ್ಯಂತ ಚಲನ ಚಿತ್ರ ಸ್ನೇಹಿ ತಾಣಗಳನ್ನು ಗುರುತಿಸಲಾಗಿದೆಯೇ; ಗುರುತಿಸಿದ್ದಲ್ಲಿ, ಅವು ಯಾವುವು; ಈ ತಾಣಗಳಲ್ಲಿ ಈಗ ಚಿತ್ರೀಕರಣ ನಡೆಸಲು ಅವಕಾಶ ನೀಡಲಾಗಿದೆಯೆ;</td><td rowspan="3">ಪ್ರವಾಸೋದ್ಯಮ ಇಲಾಖೆಯಿಂದ ಈಗಾಗಲೇ ಜಾರಿಗೆ ತಂದಿರುವ ಕರ್ನಾಟಕ ಪ್ರವಾಸೋದ್ಯಮ ನೀತಿ 2024-29 ರಲ್ಲಿ ರಾಜ್ಯದಾದ್ಯಂತ ಇರುವ ಚಲನಚಿತ್ರ ಸ್ನೇಹಿ ತಾಣಗಳನ್ನು ಆದರ್ಶ ಚಿತ್ರೀಕರಣ ತಾಣಗಳಾಗಿ ಗುರುತಿಸಲು ಅವಕಾಶ ಕಲ್ಪಿಸಲಾಗಿರುತ್ತದೆ. ಅದರಂತೆ, ಸದರಿ ಪ್ರವಾಸಿ ತಾಣಗಳ ವಿವರಗಳನ್ನು ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿಯಿಂದ ಪಡೆದು, ಈ ಬಗ್ಗೆ ಪರಿಶೀಲಿಸಿ ಚಲನಚಿತ್ರ ಸ್ನೇಹಿ ಪ್ರವಾಸಿ ತಾಣಗಳನ್ನು ಗುರುತಿಸಲು ಕ್ರಮವಹಿಸಲಾಗುವುದು.<br><br>ಈಗಾಗಲೇ 2020-26ರ ಕರ್ನಾಟಕ ಪ್ರವಾಸೋದ್ಯಮ ನೀತಿಯಡಿ ಪ್ರವಾಸೋದ್ಯಮ ಇಲಾಖೆಯಿಂದ ರಾಜ್ಯದಾದ್ಯಂತ ಗುರುತಿಸಲಾಗಿದ್ದ 810 ಪ್ರವಾಸಿ ಕೇಂದ್ರಗಳಲ್ಲಿ ಚಿತ್ರಿಕರಣ ನಡೆಸಲು ಅವಕಾಶ ಲಭ್ಯವಿದ್ದು, ಪ್ರವಾಸಿ ತಾಣಗಳಿಗೆ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರಿಗಳಿಂದ ಅನುಮತಿ ಪಡೆದು ಚಿತ್ರಿಕರಣವನ್ನು ಕೈಗೊಳ್ಳಬೇಕಿರುತ್ತದೆ.<br><br>ಆದಾಗ್ಯೂ, ರಾಜ್ಯದ ಪ್ರವಾಸಿ ತಾಣಗಳಲ್ಲಿ ಚಿತ್ರೀಕರಣ ನಡೆಸಲು ಅವಕಾಶ / ಅನುಮತಿ ಕೋರಿ ಇಲಾಖೆಗೆ ಬರುವ ಮನವಿಗಳನ್ನು ಸಂಬಂಧಪಟ್ಟ ಪ್ರವಾಸಿ ತಾಣದ ಮಾಲೀಕ ಇಲಾಖೆಗಳಿಗೆ (ಅರಣ್ಯ ಇಲಾಖೆ, ಭಾರತಿಯ ಪುರಾತತ್ವ ಇಲಾಖೆ (ASI), ತೋಟಗಾರಿಕೆ ಇಲಾಖೆ, ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಇತ್ಯಾದಿ) ಅಥವಾ ಸಂಬಂಧಪಟ್ಟ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ ಕಳುಹಿಸಿಕೊಡಲಾಗುತ್ತದೆ. ಇದಲ್ಲದೇ, ಸದರಿ ಅನುಮತಿ ಪಡೆಯಲು ಇಲಾಖೆಯಿಂದ ಅಗತ್ಯವಾಗಿರುವ ಸಹಕಾರ ನೀಡಲಾಗುತ್ತದೆ.</td></tr>
<tr><td>ಆ)</td><td>ರಾಜ್ಯಾದಾದ್ಯಂತ ಗುರುತಿಸಿರುವ ಈ ಸಾಂಸ್ಕೃತಿಕ, ಐತಿಹಾಸಿಕ, ಧಾರ್ಮಿಕ, ತಾಣಗಳಲ್ಲಿ ಎಷ್ಟು ಚಲನ ಚಿತ್ರ ನಿರ್ಮಾಣಕ್ಕೆ ಅವಕಾಶ ಮತ್ತು ಅನುಮತಿ ನೀಡಲಾಗಿದೆ;</td></tr>
<tr><td>ಇ)</td><td>ಹಾಗಿದ್ದಲ್ಲಿ, ಎಷ್ಟು ವಾಣಿಜ್ಯ ಚಲನ ಚಿತ್ರ, ಪ್ರಾದೇಶಿಕ ಚಲನ ಚಿತ್ರ, ಸಾಕ್ಷ ಚಿತ್ರ, ಟಿ.ವಿ. ಧಾರವಾಹಿಗಳು, ಓ.ಟಿ.ಟಿ. ಚಿತ್ರಗಳ ಚಿತ್ರೀಕರಣಕ್ಕೆ ಅವಕಾಶ ನೀಡಲಾಗಿದೆ? (ವಿವರ ನೀಡುವುದು)</td></tr>
</table>

**TOR 104 TDV 2025**

**(ಎಚ್.ಕೆ.ಪಾಟೀಲ್)**
ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ
ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ
ಪ್ರವಾಸೋದ್ಯಮ ಸಚಿವರು